## ಕವಿತೆ




## ಸತ್ಯಾನಂದ ಪಾತ್ರೋಟ

ಕಲೆ: ಸಂತೋಷ್ ಸಸಿಹಿತ್ಲು




# ಮರ, ಮನುಷ್ಯ, ನೆರಳು

ನಾನು ಹುಟ್ಟಿ, ಬೆಳೆದು
ಎಷ್ಟೋ ವರ್ಷಗಳ ಮೇಲೆ
ಹೊಸ ರಸ್ತೆಯ
ಎಡ ಬಲದಲಿ
ಸರಕಾರದವರು ನೆಟ್ಟರು
ತರ ತರ ಸಸಿಗಳನು

ನೋಡು ನೋಡುತ್ತಿದ್ದಂತೆ
ಅವು ಬೆಳೆದವು
ನನಗಿಂತಲೂ ಮುಂಚೆ ಹುಟ್ಟಿದವರಂತೆ

ಸಸಿ ಇದ್ದವು
ಗಿಡವಾಗಿ ಮರವಾದವು
ಮೈ ತುಂಬಾ ಹಸಿರೆಲೆ ಚಿಗುರಿಸಿ
ಮುಡಿ ತುಂಬಾ ಹೂ ಮುಡಿದು
ಒಡಲ ತುಂಬಾ ಕಾಯಿ, ಹಣ್ಣುಗಳ ಹೊತ್ತು



ಮುತ್ತೈದೆಯಾದವು
ದಾರಿ ಹೋಕರ ಕಣ್ಮನಗಳಿಗೆ
ಕನಸುಗಳ ಚಿಗುರಿಸಿದವು
ತಮ್ಮೊಡಲ ನೆರಳಿನಲಿ ತಂಗಾಳಿ ತೀಡಿದವು



ಬಿರು ಬಿಸಿಲು ಬಿರುಗಾಳಿ, ಚಳಿಗೆ
ಒಂದಿಷ್ಟು ನಲುಗದೇ
ಮೋಡ ಕವಿದು ಮಳೆ ಸುರಿಯಲು
ಸಾಕ್ಷಿಯಾದವು

ಬೆಳ ಬೆಳಗ್ಗೆ ನೋಡಬೇಕು
ಅವುಗಳೊಡಲಿನಲಿ ನಲಿವ
ಹಕ್ಕಿಗಳ ಚಿಲಿಪಿಲಿ ಗಾನದ ಧ್ಯಾನ
ಕತ್ತಲಾದರೆ ಅವುಗಳಿಗೆ ಆಗಿವೆ
ನಿರ್ಭಯದ ಸುಂದರ ವಾಸಸ್ಥಾನ

ಗಿಡಮರಗಳಲಿ
ಇರಬಹುದು ಪ್ರಭೇದ
ಮುಟ್ಟಿದವರು, ಮುಟ್ಟುವವರು
ಯಾರೇ ಇರಲಿ ಮಾಡುವುದಿಲ್ಲ ಭೇದಭಾವ
ಕನಸು ಮನಸಿನಲಿ
ಬಗೆದಿಲ್ಲ ಯಾರಿಗೂ ದ್ರೋಹ
ಕಾಣಸಿಗದಲ್ಲಿ ಪ್ರತಿಕಾರ ಮನೋಭಾವ

ಇವುಗಳ
ಅಂತರಂಗ ಬಹಿರಂಗವೇ
ಬಲು ಶುದ್ಧ

ಇವುಗಳ ಮುಂದೆ
ಮನುಷ್ಯ, ಅವನ ನೆರಳು
.......................?